ಕಥೆ

# ನೀರು ಹಂಚುವ ನೀಲಿ ಮನುಷ್ಯ

 

ಸ್ಪ್ಯಾನಿಶ್ ಮೂಲ: **ಲೂಯಿಸ ವ್ಯಾಲೆಂಜುಯೇಲಾ**

ಕನ್ನಡ ಅನುವಾದ: **ಜ.ನಾ. ತೇಜಶ್ರೀ**

ಕಲೆ: ವಿಶ್ವನಾಥ್ ಎ.ಎಸ್.

**ಹಿನ್ನೆಲೆ:** ಊರಿನ ಜನರಿಗೆ ನೀರು ಹಂಚುವ ಕೆಲಸ ಮಾಡುವ ವ್ಯಕ್ತಿಯು ಶ್ರೀಮಂತರ ಪರವಾಗಿ ಪಕ್ಷಪಾತ ಮಾಡಿ ಸಾಮಾನ್ಯ ಜನರಿಗೆ ತೊಂದರೆ ಕೊಡುತ್ತಿರುತ್ತಾನೆ. ಕಥೆಯ ನಿರೂಪಕನಾದ ಬಡವನೊಬ್ಬನು ಈಸ್ಟರ್ ಹಬ್ಬದ ದಿನ ಅವನನ್ನು ಸಿಡಿಸಿ ಕೊಲ್ಲುತ್ತಾನೆ. ಆ ದಿನ, ಏಸುಕ್ರಿಸ್ತನಿಗೆ ದ್ರೋಹ ಬಗೆದ ಜುಡಾಸ್‌ನ ಗೊಂಬೆಯನ್ನು ಸ್ಫೋಟಿಸುವುದು ಯುರೋಪ್ ಮತ್ತು ದಕ್ಷಿಣ ಅಮೆರಿಕಾದ ಹಲವು ದೇಶಗಳಲ್ಲಿ ಶತಮಾನಗಳಿಂದ ನಡೆದು ಬಂದಿರುವ ಸಂಪ್ರದಾಯ. ಗೊಂಬೆಯೊಳಗೆ ಸ್ಫೋಟಕ ವಸ್ತುಗಳನ್ನು ತುಂಬಿಸಿ ಅದನ್ನು ಸಿಡಿಸುತ್ತಾರೆ. ಜುಡಾಸ್‌ನ ಗೊಂಬೆಯನ್ನು ಸ್ಫೋಟಿಸುವುದನ್ನು ದ್ರೋಹ ಮತ್ತು ದುರಾಸೆಗೆ ಕೊಡುವ ಶಿಕ್ಷೆಯೆಂದು ಪರಿಗಣಿಸಲಾಗಿದೆ. ಈ ಕಥೆಯಲ್ಲಿ ನೀರು ಹಂಚುವವನನ್ನು ಕೊಲ್ಲುವುದಕ್ಕೂ ಜುಡಾಸ್ ಗೊಂಬೆಯನ್ನು ಸಿಡಿಸುವುದಕ್ಕೂ ಸಂಬಂಧ ಕಲ್ಪಿಸಲಾಗಿದೆ. ನಿರೂಪಕನು ತಾನು ಆ ಕೆಲಸವನ್ನು ಮಾಡಿಲ್ಲವೆಂದು ಮತ್ತೆಮತ್ತೆ ಹೇಳುತ್ತಲೇ ಇದ್ದರೂ ನಿಧಾನವಾಗಿ ಗುಟ್ಟು ಅನಾವರಣವಾಗುತ್ತದೆ.

ಲೂಯಿಸ ವ್ಯಾಲೆಂಜುಯೇಲಾ ಅವರ ಈ ಕಥೆಯನ್ನು ಕ್ರಿಸ್ಟೋಫರ್ ಲೆಲ್ಯಾಂಡ್ ಇಂಗ್ಲಿಷ್‌ಗೆ ಅನುವಾದಿಸಿದ್ದು ಪ್ರಸ್ತುತ ಕನ್ನಡದ ಓದುಗರಿಗಾಗಿ ಇಲ್ಲಿದೆ.

ಅವನನ್ನು ಅವರೇ ನಂಗೆ ತೋರ್ಸಿದ್ದು: ನೋಡು, ಅವನೇ ನೀರು ಹಂಚೋ ಮನುಷ್ಯ ಅಂತ ಹೇಳಿದ್ರು. ನಂಗೆ ಆ ಹೆಸರು ಇಷ್ಟ ಆಯ್ತು. ಅದಕ್ಕೇ ಅವನ ಹತ್ತಿರ ಹೋದೆ. ನಾನು ಹತ್ತಿರ ಹೋಗಿದ್ದು ನಮ್ಮ ಕಡೆ ಆ ಕೆಲಸಕ್ಕೆ ತುಂಬ ಪ್ರಾಮುಖ್ಯತೆ ಇದೆ ಅನ್ನೋದಕ್ಕೇ ಹೊರತು, ರೇಷನ್ ಮೂಲಕ ಜನರಿಗೆ ಹಂಚಬೇಕಾದ ನೀರನ್ನು ತನಗೆ ಇಷ್ಟ ಬಂದವರಿಗೆ ಇಷ್ಟ ಬಂದಷ್ಟು ವಿತರಣೆ ಮಾಡೋ ಅಧಿಕಾರ ಅವನಿಗೆ ಇತ್ತು ಅನ್ನೋದಕ್ಕಲ್ಲ. ಆದರೆ ಆ ಫ್ಯೂಸಿಗೆ ಬೆಂಕಿ ತಗುಲಿಸಿದ್ದು ನಾನಲ್ಲ. ಬಹಳ ಜನ ಹೇಳೋ ಹಾಗೆ, ನಾನು ಅವನಿಗೆ ತುಂಬಾ ಹತ್ತಿರ ಹೋಗಿದ್ದೆ. ಅವನನ್ನು ಮುಟ್ಟೋಕೂ ನಂಗೆ ಸಾಧ್ಯವಾಗಿತ್ತು. (ಈಗಿನ ಕಾಲದಲ್ಲಿ ಬಿಡಿ,